ದಿನಾಂಕಃ **25.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು : 1 ನೇ ಪ್ರತಿವಾದಿಯ ಪರ ವಕೀಲರು ಪಾಟೀಸವಾಲು ಮಾಡುವುದಾಗಿ ತಿಳಿಸಿದ್ದು ಉಳಿದ ಪ್ರತಿವಾದಿಗಳ ಪರ ವಕೀಲರು 1 ನೇ ಪ್ರತಿವಾದಿ ಯಾವುದೇ ಪ್ರತಿವಾದ ಪತ್ರ ಸಲ್ಲಿಸಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಯಾವುದೇ ವಾದನೆಗಳು ಇಲ್ಲದ ಪಾಟೀಸವಾಲು ಮಾಡಲು ಅನುಮತಿ ನಿರಾಕರಿಸಲಾಗಿದೆ.**

ಪಾಟೀ ಸವಾಲು **:** **2** ರಿಂದ **5** ನೇ ಪ್ರತಿವಾದಿಗಳ ಪರ ವಕೀಲರಿಂದಃ

01. ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ವಾದಿ ಉಪ್ಪಾರ ಚೌಡಮ್ಮನ ಗಂಡನ ಊರು ಯಾವುದು? ಎಂದರೆ ದಿಬ್ಬಳ್ಳಿ . ವಾದಿಯ ಗಂಡ ಪಕ್ಕೀರಪ್ಪ ಮೃತಪಟ್ಟಿದ್ದಾರೆ ಎಂದರೆ ಸರಿ. ಚೌಡಮ್ಮ ಮತ್ತು ಪಕ್ಕೀರಪ್ಪನಿಗೆ ಯಾವುದೇ ಸಂತಾನ ಇಲ್ಲವೆಂದರೆ ಸರಿ. 1 ನೇ ಪ್ರತಿವಾದಿ ಉಪ್ಪಾರ ಚೌಡಪ್ಪನಿಗಿಂತ ವಾದಿ ಉಪ್ಪಾರ ಚೌಡಮ್ಮ ವಯಸ್ಸಿನಲ್ಲಿ ಚಿಕ್ಕವಳು ಎಂದರೆ ಸರಿ. 1 ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು? ಎಂದರೆ 6 ಮಂದಿ ಮಕ್ಕಳು. ಅವರಲ್ಲಿ ನಾಲ್ಕು ಜನ ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು ಇರುತ್ತಾರೆ ಎಂದರೆ ಸರಿ. ಅವರುಗಳ ಹೆಸರುಗಳು ಶಿವಪ್ಪ, ಮಲ್ಲಪ್ಪ, ವೀರೇಶ್ @ ವೀರಪ್ಪ , ಶಾಂತಪ್ಪ , ಬಸಮ್ಮ ಮತ್ತು ಲಕ್ಷ್ಮಿ ಎಂದರೆ ಸರಿ. ಇವರಲ್ಲಿ ಶಾಂತಪ್ಪನನ್ನು ಹೊರತುಪಡಿಸಿ ಉಳಿದ ಎಲ್ಲರಿಗೂ ಮದುವೆಗಳಾಗಿವೆ ಎಂದರೆ ಸರಿ. ವೀರಪ್ಪ ನನಗೆ ಗಂಡನಾಗಬೇಕು ಎಂದರೆ ಸರಿ. ನಾನು ಈ ದಾವೆಯ 1 ನೇ ಪ್ರತಿವಾದಿ ಉಪ್ಪಾರ ಚೌಡಪ್ಪನ ಸೊಸೆ ಎಂದರೆ ಸರಿ. ಚೌಡಪ್ಪನ 4 ಮಂದಿ ಗಂಡುಮಕ್ಕಳು ಅವರವರಿಗೆ ಬರಬೇಕಾದ ಹಿಸ್ಸೆಗಳನ್ನು ಪಡೆದುಕೊಂಡು ಈಗಾಗಲೇ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತವರು ಮನೆ ಹೊಸಪೇಟೆಯ ಪಾಪಿನಾಯಕನಹಳ್ಳಿ ಎಂದರೆ ಸರಿ. 1 ನೇ ಪ್ರತಿವಾದಿ ಸಲ್ಲಿಸಿದ್ದ ದಾವೆ ಓ.ಎಸ್. ನಂ. 54/2013 ಮತ್ತು ಆರ್.ಎ. ನಂ. 64/2018 ವಜಾ ಆದ ನಂತರ ವಾದಿ ಚೌಡಮ್ಮ ಎ.ಸಿ.ಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಳು ಎಂದರೆ ಸರಿ. 1 ನೇ ಪ್ರತಿವಾದಿ ಯಾವ ಆಸ್ತಿಗಳ ಬಗ್ಗೆ ಸದರಿ ದಾವೆ ಮತ್ತು ಅಪೀಲನ್ನು ಸಲ್ಲಿಸಿದ್ದರೋ ಅದೇ ಆಸ್ತಿಗಳ ಬಗ್ಗೆ ವಾದಿಯು ಕಂದಾಯ ಮೇಲ್ಮನವಿ ಸಲ್ಲಿಸಿದ್ದಳು ಎಂದರೆ ಇನ್ನೂ ಒಂದು ಆಸ್ತಿ ಬಿಟ್ಟು ಹೋಗಿದ್ದನ್ನು ಕೂಡಾ ಸೇರಿಸಿ ಮೇಲ್ಮನವಿ ಸಲ್ಲಿಸಿದ್ದರು. ನಾನು ಇನ್ನೂ ಒಂದು ಆಸ್ತಿ ಸೇರಿಸಿ ಮೇಲ್ಮನವಿ ಸಲ್ಲಿಸಿದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎ.ಸಿ.ಯವರ ನ್ಯಾಯಾಲಯದಲ್ಲಿನ ಅಪೀಲಿನ ಸಂ. 114/2023 ಆಗಿತ್ತು ಎಂದರೆ ಸರಿ. ಹಗರನೂರು ಗ್ರಾಮದ ಸರ್ವೇ ನಂಬರುಗಳ ಕುರಿತಂತೆ ಎ.ಸಿ.ಯವರ ನ್ಯಾಯಾಲಯದಲ್ಲಿ ಆರ್.ಎ. ನಂ. 113/2023 ಎಂಬ ಅಪೀಲು ದಾಖಲಾಗಿತ್ತು ಎಂದರೆ ಸರಿ. ಸದರಿ ಎರಡೂ ಕಂದಾಯ ಅಪೀಲುಗಳಲ್ಲಿ ವಾದಿ ಉಪ್ಪಾರ ಚೌಡಮ್ಮನೇ ಹಾಜರಾಗುತ್ತಿದ್ದರು ಎಂದರೆ ಸರಿ. ಅವುಗಳಲ್ಲಿ ವಾದಿಯು ತನ್ನ ವಿಳಾಸವನ್ನು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ದಿಬ್ಬದಳ್ಳಿ ಎಂದು ತೋರಿಸಿದ್ದಳು ಎಂದರೆ ಸರಿ. ಈ ದಾವೆಯಲ್ಲಿ ವಾದಿಯು ತನ್ನ ವಿಳಾಸವನ್ನು ಪಾಪಿನಾಯಕನಹಳ್ಳಿ ಎಂದು ಬರೆಯಿಸಿದ್ದಾರೆ ಎಂದರೆ ಸರಿ. ವಾದಿಯು ದಿಬ್ಬದಳ್ಳಿಯಿಂದ ಪಾಪಿನಾಯಕನಹಳ್ಳಿಗೆ ವಾಸ ಮಾಡಲು ಯಾವಾಗ ಹೋಗಿದ್ದಳು? ಎಂದು ವಾದ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ 2022 ರಲ್ಲಿ ಹುಷಾರಿಲ್ಲವೆಂದು ಪಾಪಿನಾಯಕನಹಳ್ಳಿಗೆ ಬಂದಿದ್ದರು, ಆ ಸಂಗತಿಯನ್ನು ವಾದ ಪತ್ರದಲ್ಲಿ ಬರೆಯಿಸಿಲ್ಲ 1 ನೇ ಪ್ರತಿವಾದಿ ಕೂಡಾ ಪಾಪಿನಾಯಕನಹಳ್ಳಿಯಲ್ಲೇ ವಾಸ ಮಾಡುತ್ತಾರೆ ಎಂದರೆ

ಇಲ್ಲ, ಅವರ ಮಗ ಶಿವಪ್ಪನ ಜೊತೆ ಹಿರೇಕೊಳಚಿಯಲ್ಲಿ ವಾಸ ಮಾಡುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

02. ವಾದಿ ಕೊಟ್ಟಿದ್ದಾರೆನ್ನುವ ಜಿ.ಪಿ.ಎ. ನಿಪಿ77 ನ್ನು ಹೊಸಪೇಟೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿ. ನಿಪಿ77 ನ್ನು ನಾನೇ ಮಾಹಿತಿ ಕೊಟ್ಟು ತಯಾರಿಸಿದ್ದೆ ಎಂದರೆ ನಾನೇ ಹೇಳಿ ಬರೆಯಿಸಿದ್ದೆ. ನಿಪಿ77 ಕ್ಕೆ ಸಾಕ್ಷಿ ಸಹಿ ಮಾಡಿದ ವ್ಯಕ್ತಿಗಳೂ ಕೂಡಾ ಪಾಪಿನಾಯಕನಹಳ್ಳಿಯವರು ಎಂದರೆ ಒಬ್ಬರು ಮಾತ್ರ ಪಾಪಿನಾಯಕನಹಳ್ಳಿಯವರು . ಲಂಕೆಪ್ಪ ಪಾಪಿನಾಯಕನಹಳ್ಳಿಯವರು ಮತ್ತು ಮಹೇಶ ಹಿರೇಕೊಳಚಿಯವರು ಇರುತ್ತಾರೆ. ನಿಪಿ77 ರಲ್ಲಿ ಸಾಕ್ಷಿಗಳ ತಂದೆ ಹೆಸರು ಮತ್ತು ವಿಳಾಸ ಯಾವುದೂ ನಮೂದಾಗಿಲ್ಲ ಎಂದರೆ ಸರಿ. ಅವರಿಬ್ಬರೂ ಪಾಪಿನಾಯಕನಹಳ್ಳಿಯ ವಾಸಿಗಳಾಗಿದ್ದರೂ ಒಬ್ಬರು ಮಾತ್ರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಬ್ಲಡ್ ಶುಗರ್ ಮತ್ತು ಬಿ.ಪಿ. ಇತ್ತು ಎಂಬ ಬಗ್ಗೆ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ವಾದಿಯು ನನಗೆ ಯಾವುದೇ ಜಿ.ಪಿ.ಎ. ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಇಬ್ಬರೂ ಸೇರಿ ಈ ಕೇಸಿಗೆ ಅನುಕೂಲವಾಗುವಂತೆ ಜಿ.ಪಿ.ಎ. ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯೇ ಖುದ್ದಾಗಿ ಕೋರ್ಟಿಗೆ ಬಂದು ಸಾಕ್ಷಿ ಹೇಳಿದರೆ ನಿಜ ಸಂಗತಿ ಗೊತ್ತಾಗುತ್ತದೆ ಎಂಬ ಕಾರಣದಿಂದ ಜಿ.ಪಿ.ಎ. ಮೂಲಕ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವೆಯಲ್ಲಿ ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗುತ್ತಿದ್ದರೂ ಅವರು ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ . ನನಗೆ ಆ ವಿಚಾರ ಗೊತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದ 3 ನೇ ಪ್ಯಾರಾದಲ್ಲಿ ಹೇಳಿರುವ ಮಲ್ಲಪ್ಪನಿಗೆ 5 ಜನ ಮಕ್ಕಳಿದ್ದರು ಎಂದರೆ ಇಲ್ಲ, ಮೂವರು ಮಕ್ಕಳು ಮಾತ್ರ ಇದ್ದರು . ಮಲ್ಲಪ್ಪನ ಮಕ್ಕಳ ಹೆಸರುಗಳು ವೀರಪ್ಪ, ದೊಡ್ಡಗುಂಡಪ್ಪ, ಸಣ್ಣಗುಂಡಪ್ಪ, ಮುದುಕಪ್ಪ ಮತ್ತು ತಿಪ್ಪಣ್ಣ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಾದಿಗಿಂತ ವಯಸ್ಸಿನಲ್ಲಿ ಹಿರಿಯನಾದ ಕಾರಣ 1 ನೇ ಪ್ರತಿವಾದಿಗೆ ಮಲ್ಲಪ್ಪನ ವಂಶವೃಕ್ಷದ ಬಗ್ಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸಲ್ಲಿಸಿದ್ದ ಓ.ಎಸ್. ನಂ. 54/2013 ರಲ್ಲಿ ಮಲ್ಲಪ್ಪನ ವಂಶವೃಕ್ಷವನ್ನು ನಿಪಿ1 ಎಂದು ಗುರುತಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳುತ್ತೇನೆ, ನನಗೆ ವಾದಿ ಚೌಡಮ್ಮ ಮಲ್ಲಪ್ಪನಿಗೆ ಮೂರೇ ಜನ ಮಕ್ಕಳು ಎಂದು ಹೇಳಿರುತ್ತಾಳೆ. ಮಲ್ಲಪ್ಪನ 5 ಜನ ಮಕ್ಕಳನ್ನು ತೋರಿಸದೇ ನನಗೆ ಅನುಕೂಲವಾಗುವಂತೆ ವಾದ ಪತ್ರದಲ್ಲಿ ಅವರ ವಂಶವೃಕ್ಷವನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ.

03. ನಿಪಿ1 ಎಂದು ನಾನು ಗುರುತಿಸಿಕೊಂಡ ದಾಖಲೆ ಮೇಲೆ ವಾದಿಯ ಹೆಬ್ಬೆಟ್ಟಿನ ಗುರುತು ಪಡೆದು ವಂಶವೃಕ್ಷವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾರಿಗಳು ಮಂಜೂರು ಮಾಡುವ ವಂಶವೃಕ್ಷವನ್ನು ಪಡೆದುಕೊಂಡು ಹಾಜರು ಮಾಡಿಲ್ಲ ಎಂದರೆ ಸರಿ. ನಿಪಿ1 ರ ಜೊತೆ ಹಾಜರು ಮಾಡಿದ ವಂಶವೃಕ್ಷ ಮುದುಕಪ್ಪನ ಕುಟುಂಬ ಸದಸ್ಯರನ್ನು ಮಾತ್ರ ಒಳಗೊಂಡಿರುವ ವಂಶವೃಕ್ಷ ಎಂದರೆ ಸರಿ. ಈ ದಾವೆಯಲ್ಲಿ ನಾನು ಓ.ಎಸ್. ನಂ. 54/2013 ಮತ್ತು ಆರ್.ಎ. ನಂ.64/2018 ರ ದೃಢೀಕೃತ ತೀರ್ಪುಗಳನ್ನು ಗುರುತಿಸಿಕೊಂಡಿದ್ದೇನೆ ಎಂದರೆ ಸರಿ. ಆದರೆ ನಾನು ಸದರಿ ದಾವೆಯಲ್ಲಿ 1 ನೇ ಪ್ರತಿವಾದಿ ಗುರುತಿಸಿಕೊಂಡಿದ್ದ ಮಲ್ಲಪ್ಪನ ವಂಶವೃಕ್ಷದ ದೃಢೀಕೃತ ಪ್ರತಿಯನ್ನು ಗುರುತಿಸಿಕೊಂಡಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ಹೇಳಿರುವಂತೆ ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸ ಮಾಡಿಕೊಂಡು ಒಟ್ಟಾಗಿ ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಹೊಂದಿದ್ದಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಎಲ್ಲಾ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ವಾದಿ ಚೌಡಮ್ಮ ಮದುವೆಗೆ ಮುಂಚೆ ಹಿರೇಕೊಳಚಿಯಲ್ಲಿ ವಾಸವಾಗಿದ್ದರು ಎಂದರೆ ಸರಿ.

ಹಿರೇಕೊಳಚಿ ಗ್ರಾಮದಲ್ಲಿ ಉಪ್ಪಾರ ಮುದುಕಪ್ಪ, ಆತನ ಹೆಂಡತಿ, ಮಕ್ಕಳಾದ ಉಪ್ಪಾರ ಚೌಡಪ್ಪ ಮತ್ತು ಉಪ್ಪಾರ ಚೌಡಮ್ಮ ಒಟ್ಟಿಗೆ ವಾಸ ಮಾಡುತ್ತಿದ್ದರು ಎಂದರೆ ಆಗ ವಾಸ ಮಾಡುತ್ತಿದ್ದರು. ಆ ಸಮಯದಲ್ಲಿ ಉಪ್ಪಾರ ಮುದುಕಪ್ಪನ ಸ್ವಾಧೀನಕ್ಕೆ ಬಂದ ಆಸ್ತಿಗಳನ್ನು ಅವರು ಸಾಗುವಳಿ ಮಾಡಿಕೊಂಡು ಸ್ವಾಧೀನ ಹೊಂದಿದ್ದರು ಎಂದರೆ ಸರಿ. ಉಪ್ಪಾರ ಮುದುಕಪ್ಪ ತನ್ನ ಜಮೀನುಗಳಲ್ಲಿ ಹತ್ತಿ, ಶೇಂಗಾ, ಜೋಳ ಮತ್ತು ಇತರೆ ಬೆಳೆಗಳನ್ನು ಬೆಳೆಯುತ್ತಿದ್ದ ಎಂದರೆ ಸರಿ. ಮುದುಕಪ್ಪನ ಭಾಗಕ್ಕೆ ಬಂದ ಮನೆಯಲ್ಲಿ ಆತ, ಆತನ ಹೆಂಡತಿ ಮತ್ತು ಮಕ್ಕಳು ವಾಸ ಮಾಡುತ್ತಿದ್ದರು ಎಂದರೆ ಹೌದು ಎಂದು ಹೇಳಿ ನಂತರ ಮನೆಯನ್ನು ಅವರೇ ಖರೀದಿ ಮಾಡಿದ್ದರು ಎಂದು ಹೇಳಿದ್ದಾರೆ. ಮುದುಕಪ್ಪ 1945 ರಲ್ಲಿ ಮನೆ ಖರೀದಿ ಮಾಡಿದ್ದರು. ಯಾರಿಂದ ಮನೆ ಖರೀದಿ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ಮನೆ ಖರೀದಿ ಮಾಡಿದ ಬಗ್ಗೆ ದಾಖಲೆಗಳು ಇರುತ್ತವೆ, ಅವುಗಳನ್ನು ಹಾಜರು ಮಾಡುತ್ತೇನೆ. ಮುದುಕಪ್ಪ ಮನೆ ಖರೀದಿ ಮಾಡಿದ್ದನೆಂದು ವಾದ ಪತ್ರದಲ್ಲಿ ಬರೆಯಿಸಿದ್ದೀರಾ? ಎಂದರೆ ಬರೆಯಿಸಿಲ್ಲ.

04. ಮಲ್ಲಪ್ಪನ ಬಿನ್ ಸಣ್ಣಗುಂಡಪ್ಪನ ಮಕ್ಕಳ ಪೈಕಿ ವೀರಪ್ಪ, ದೊಡ್ಡಗುಂಡಪ್ಪ ಮತ್ತು ತಿಪ್ಪಣ್ಣನಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದರೆ ಸರಿ. ಸಣ್ಣಗುಂಡಪ್ಪನ ಮಗನೇ ಮಲ್ಲಪ್ಪ ಬಿನ್ ಸಣ್ಣಗುಂಡಪ್ಪ ಎಂದರೆ ಸರಿ ಎಂದು ಹೇಳಿ ನಂತರ ಸಾಕ್ಷಿಯು ಅವರಿಗೂ ನಮ್ಮ ಕುಟುಂಬಕ್ಕೂ ಸಂಬಂಧವಿಲ್ಲವೆಂದು ಹೇಳಿದ್ದಾರೆ. ಸಣ್ಣಗುಂಡಪ್ಪನ ಮಗ ಮಲ್ಲಪ್ಪನೇ 2 ರಿಂದ 4 ನೇ ಪ್ರತಿವಾದಿಗಳ ತಂದೆ ಎಂದರೆ ಸರಿ. ಉಪ್ಪಾರ ಮಲ್ಲಪ್ಪನ ಮಕ್ಕಳಾದ ಉಪ್ಪಾರ ಮುದುಕಪ್ಪ, ಉಪ್ಪಾರ ಸಣ್ಣಗುಂಡಪ್ಪ ಮತ್ತು ಉಪ್ಪಾರ ದೊಡ್ಡಗುಂಡಪ್ಪ 1941 ಕ್ಕಿಂತ ಮುಂಚೆಯೇ ಪಾಲುವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗದಲ್ಲಿ ಉಪ್ಪಾರ ಮುದುಕಪ್ಪನ ಭಾಗಕ್ಕೆ ಸರ್ವೇ ನಂ. 322 ರಲ್ಲಿ 1 ಎಕರೆ, 323 ರಲ್ಲಿ 9 ಎಕರೆ, 1 ಡಿ ಯಲ್ಲಿ 1 ಎಕರೆ 6 ಸೆಂಟ್ಸ್, 2 ಸಿ ಯಲಿ 2 ಎಕರೆ 10 ಸೆಂಟ್ಸ್, ದಾವಾ ಡಿ ಸ್ವತ್ತಿನಲ್ಲಿ 80 ಸೆಂಟ್ಸ್, ಸ. ನಂ. 90 ಎಫ್ ರಲ್ಲಿ 2 ಎಕರೆ 2 ಸೆಂಟ್ಸ್, ಸ. ನಂ. 90 ಜಿ ನಲ್ಲಿ 1 ಎಕರೆ 24 ಸೆಂಟ್ಸ್ ಮತ್ತು ವಾದ ಪತ್ರದ ಪ್ಯಾರಾ 3 ರಲ್ಲಿ ಹೇಳಿರುವ ಕ್ರಮ ಸಂ 9 ರ ಆಸ್ತಿ ಮತ್ತು ಇತರೆ ಆಸ್ತಿಗಳು ಪಾಲುವಿಭಾಗದ ಮೂಲಕ ಬಂದಿದ್ದವು ಎಂದರೆ ಇಲ್ಲ, ಅವುಗಳು ಮುದುಕಪ್ಪನಿಗೆ ಮಂಜೂರಾಗಿದ್ದ ಬಗ್ಗೆ ಡಯಾಗ್ಲೆಟ್ ನಲ್ಲೇ ನಮೂದಾಗಿವೆ. ಅವು ಮುದುಕಪ್ಪನಿಗೆ ಮಂಜೂರಾಗಿದ್ದವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರ್ವೇ ನಂ. 90 ಜಿ, 83 ಎ ಮತ್ತು 90 ಎಫ್ ಆಸ್ತಿಗಳನ್ನು ಮುದುಕಪ್ಪ ಖರೀದಿ ಮಾಡಿದ್ದಾರೆ. ನಾನು ಸದರಿ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಅವು ಸ್ವಂತ ಆಸ್ತಿಗಳಾಗಿರುವ ಕಾರಣ ದಾವೆಗೆ ಸೇರಿಸಿಲ್ಲ.

***(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.